ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 2-

ಬೆಂಗಳೂರು, ಗುರುವಾರ, ಜನವರಿ ತಾ॥ 15, ಸನ 1903.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್‌ರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಸೆನ್ಸಸ್ ಡಿಪಾರ್ಟ್‌ಮೆಂಟ್.

ನೋಟಿಸ್.

ಮೈಸೂರು ಸೀಮೆಯ ಡೆಪ್ಯುಟಿ ಸೆನ್ಸಸ್ಸು ಸೂಪರ್‌ಟೆಂಡೆಂಟರವರ ಆಫೀಸ್.

ತಾರೀಖು 12ನೇ ಜನವರಿ 1903.

ಬೆಂಗಳೂರು ಹೈಗ್ರೌಂಡು ಸ್ಯಾಂಕೀರೋಡು ಅಬ್ಬಾಟ್ ಹಾಸ್ಪಿನಲ್ಲಿರತಕ್ಕ ಡೆಪ್ಯುಟಿ ಸೆನ್ಸಸ್ಸು ಸೂಪರ್‌ಟೆಂಡೆಂಟರವರ ಆಫೀಸಿನಲ್ಲಿ ಸ್ವಲ್ಪಭಾಗ ಕತ್ತರಿಸಲ್ಪಟ್ಟ ಬರೆದ ಸುಮಾರು 400 ಮಣ 18 ಅಂಗುಲ ಉದ್ದ 10 ಅಂಗುಲ ಅಗಲ ಇರತಕ್ಕ ಬಾದಾಮಿ ಕಾಗದದ ಸೆನ್ಸಸ್ಸು ಷೆಡ್ಯೂಲುಗಳು ಸನ 1903ನೇ ಇಸವಿ ಜನವರಿ ತಿಂಗಳು 28ನೇ ಬುಧವಾರದ ಲಾಗಾಯಿತು ಹರಾಜು ಹಾಕಲ್ಪಡುತ್ತದೆ.

2. ಸರ್ಕನ್ನು ಕೊಂಡುಕೊಳ್ಳುವದಕ್ಕೆ ಅಭಿಲಾಷೆ ಉಳ್ಳವರಿಂದ "ಷೆಡ್ಯೂಲ್ ಕಾಗದವನ್ನು ಕೊಂಡುಕೊಳ್ಳುವದಕ್ಕಾಗಿ ಟೆಂಡರುಗಳು" ಎಂಬದಾಗಿ ವಿಳಾಸ ಬರದು ಮೊಹರಾದ ಲಕ್ಕೋಟೆಗಳು ಮಜಕೂರು 24ನೇ ಶನಿವಾರದ ಪೂರ್ವಾಹ್ನದವರಿಗೂ ಈ ಕೆಳಗೆ ರುಜು ಮಾಡಿರುವವರಿಂದ ಹಿಡಿಯಲ್ಪಡುತ್ತೆ.

(ಎ) ಸರ್ಕನ್ನು ಕೊಂಡುಕೊಳ್ಳುವದಕ್ಕೆ ಸಿದ್ಧವಾಗಿರುವಂಥಾ ಟೆಂಡರುದಾರ್ರು (1 ಮಣ =40 ಕೇರು, ಕೇರು=24 ರೂಪಾಯಿ ತೂಕ) ಮಣ ಬಂದಕ್ಕೆ ದರವನ್ನು ನಮೂದಿಸಿ ಟೆಂಡರು ಜೊತೆಗೆ 25 ರೂಪಾಯಿ ಡಿಪಾಜಿಟ್ಟನ್ನು ಕಳುಹಿಸಬೇಕು.

(ಬಿ) ಮೈಸೂರು ಸೀಮೆಯ ಡೈರೆಕ್ಟರ್ ಆಫ್ ಸ್ಟ್ಯಾಟಿಸ್ಟಿಕ್ಸ್ ಮತ್ತು ಸೆನ್ಸಸ್ಸು ಸೂಪರ್‌ಟೆಂಡೆಂಟ್ ಸಾಹೇಬರವರು ಟೆಂಡರುಗಳನ್ನು ಮಂಜೂರು ಮಾಡುವದಕ್ಕೂ ಅಥವಾ ವಜಾ ಮಾಡುವದಕ್ಕೂ ಮೊಕ್ತೇಸರರಾಗಿರುತ್ತಾರೆ.

ಅತ್ಯಂತ ಹೆಚ್ಚು ದರವುಳ್ಳ ಟೆಂಡರನ್ನಾಗಲಿ ಯಾ ಯಾವ ಟೆಂಡರನ್ನೇ ಆಗಲಿ ಮಂಜೂರು ಮಾಡುವದಕ್ಕೂ ಅಥವಾ ಕಾರಣಗಳನ್ನು ಕೊಡುವದಕ್ಕೂ ಬದ್ಧರಾಗಿರುವದಿಲ್ಲ.

(ಸಿ) ವಜಾ ಮಾಡಿದ ಟೆಂಡರುಗಳ ಡಿಪಾಜಿಟ್ ಮೊಬಲಗು ವಾಪಸು ಮಾಡಲ್ಪಡುತ್ತೆ ಮತ್ತು ಮಂಜೂರಾದ ಟೆಂಡರುದಾರ್ರು ಸರ್ಕನ್ನು ತೂಕ ಮಾಡಿಸಿ ಬಾಕಿ ಮೊಬಲಗನ್ನು ನಗದು ಕೊಟ್ಟು ಟೆಂಡರು ಮಂಜೂರಾದ ವರ್ತಮಾನ ತಿಳಿದ 5 ದಿವಸದ ಒಳಗಾಗಿ ಸ್ವಂತ ಖರ್ಚುನಿಶಿ ಸರ್ಕನ್ನು ತೆಗದುಕೊಂಡುಹೋಗಲು ತಪ್ಪಿದರೆ ಟೆಂಡರುದಾರ್ರ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಮತ್ತೊಂದು ಮಾರಾಟದಿಂದುಂಟಾದ ಲುಕ್ಸಾನಿಗೆ ಗುರಿಯಾಗುತ್ತಾರೆ.

ಮೇಲೆ ಹೇಳಿದ ಪ್ರಕಾರ ಟೆಂಡರು ಮೂಲಕ ಮಾರಾಟ ಪೂರ್ತಿಯಾದ ಪಕ್ಷದಲ್ಲಿ ಹರಾಜು ನಿಲ್ಲಿಸಲ್ಪಟ್ಟು ಹರಾಜು ನಿಯಮಿತವಾದದಿನದ ತತ್ಪೂರ್ವವೇ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನೋಟಿಸು ಹಾಕಲ್ಪಡುತ್ತದೆ.

ಸರ್ಕನ್ನು ತೆಗದುಕೊಳ್ಳಲು ಅಭಿಲಾಷೆವುಳ್ಳವರು ಆಫೀಸ್ ದಿನಗಳಲ್ಲಿ ಮಧ್ಯಾಹ್ನ 3 ಘಂಟೆಯಿಂದ 5 ಘಂಟೆ ವರಿವಿಗೆ ಸರಕನ್ನು ಅಜಮಾಯಿಷಿ ಮಾಡಬಹುದು.

ಟಿ. ಎಸ್. ಲಕ್ಷ್ಮೀನರಸಿಂಹರಾವ್,
ಅಸಿಸ್ಟೆಂಟ್ ಸೆನ್ಸಸ್ ಸೂಪರ್‌ಟೆಂಡೆಂಟ್ ಇನ್‌ಛಾರ್ಜ್ ಆಫ್ ದಿ
ಡೆಪ್ಯುಟಿ ಸೆನ್ಸಸ್ ಸೂಪರ್‌ಟೆಂಡೆಂಟ್ಸ್ ಆಫೀಸ್ ಇನ್ ಮೈಸೂರು,
ಬೆಂಗಳೂರು.